ಕರ್ನಾಟಕ ಸರ್ಕಾರ

ಕೃಷಿ ಇಲಾಖೆ

ಸಂಖ್ಯೆ: ಉಕೃನಿ/ಸಾಕೃಷ/ಸಾ.ಭಾ.ಯೋ./ಸು./2013-14

ಕೃಷಿ ನಿರ್ದೇಶನಾಲಯ
ಶೇಷಾದ್ರಿ ರಸ್ತೆ , ಬೆಂಗಳೂರು
ದಿನಾಂಕ: 18-02-2014

**<u>ಸಾವಯವ ಭಾಗ್ಯ ಸುತ್ತೋಲೆ-2</u>**

**ವಿಷಯ:** ಹೋಬಳಿ ಮಟ್ಟದ ಸಾವಯವ ಭಾಗ್ಯ ಯೋಜನೆ – ಕ್ರಿಯಾ ಯೋಜನೆ ಮತ್ತು ಆಡಳಿತಾತ್ಮಕ ವೆಚ್ಚಕ್ಕಾಗಿ ಅನುದಾನ ಬಿಡುಗಡೆ ಮಾಡಿತ್ತಿರುವ ಬಗ್ಗೆ ಮತ್ತು ಅನುದಾನದ ವೆಚ್ಚದ ಮಾರ್ಗಸೂಚಿಗಳು.

**ಉಲ್ಲೇಖ:** 1. ಸರ್ಕಾರಿ ಆದೇಶ ಸಂಖ್ಯೆ: ಕೃಇ/30/ಕೃಯೋಕಾ/2013, ತಾ:19-08-2013

2. ದಿನಾಂಕ: 25-01-2014 ಕೃಷಿ ನಿರ್ದೇಶನಾಲಯದಲ್ಲಿ ಜರುಗಿದ ಎರಡನೆಯ ಸಾವಯವ ಕೃಷಿ ಸಲಹಾ ಸಮಿತಿ ಸಭೆಯ ನಡವಳಿ

3. ಅನುದಾನ ಬಿಡುಗಡೆ ಆದೇಶ ಸಂಖ್ಯೆ:ಎಸಿಎ/ಬಿಜಿಟಿ/104-12/ಅಟಿ/2013-14, ತಾ: 15.02.2014

*********

"ಸಾವಯವ ಭಾಗ್ಯ ಯೋಜನೆ" ಯ ಅನುಷ್ಠಾನಕ್ಕಾಗಿ ಉಲ್ಲೇಖ (2) ರ ಅನುದಾನ ಬಿಡುಗಡೆ ಆದೇಶದಲ್ಲಿ ಕ್ರಿಯಾ ಯೋಜನೆ ಅನುಷ್ಠಾನ ಮತ್ತು ಆಡಳಿತಾತ್ಮಕ ವೆಚ್ಚಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದ್ದು ಕಾರ್ಯಕ್ರಮ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ.

1. ಯೋಜನೆಯ ಅನುಷ್ಠಾನಕ್ಕಾಗಿ ಅನುಬಂಧ -1 ರಲ್ಲಿ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ನೀಡಲಾಗಿದೆ. ಕಾರ್ಯಕ್ರಮ ಅನುಷ್ಠಾನಗೊಳಿಸುತ್ತಿರುವ ಪ್ರತಿ ಹೋಬಳಿಗೆ ರೂ.3.75ಲಕ್ಷದಂತೆ ಕ್ರಿಯಾಯೋಜನೆಯ ಅನುಷ್ಠಾನಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆ (ಉಪ ಶೀರ್ಷಿಕೆ 059 ಅಡಿಯಲ್ಲಿ ರೂ.2.45ಲಕ್ಷ ಮತ್ತು ಉಪ ಶೀಷಿಕೆ 106 ಅಡಿಯಲ್ಲಿ ರೂ.1.30ಲಕ್ಷ). ಈ ಅನುದಾನವನ್ನು ಯೋಜನೆ ಅನುಷ್ಠಾನ ಪ್ರದೇಶದ ಫಲಾನುಭವಿಯ ರೈತರ ಸಂಘದ/ಗುಂಪಿನ ಹೆಸರಿನಲ್ಲಿ ತೆರೆದಿರುವ/ತರೆಯಲಾಗುವ ಉಳಿತಾಯ ಖಾತೆಗೆ ಪಾವತಿಸಲು ಕ್ರಮ ಕೈಗೊಳ್ಳುವುದು. ಈ ಖಾತೆಯನ್ನು ರೈತರ ಗುಂಪಿನ ಅಧ್ಯಕ್ಷರು, ಸರ್ಕಾರೇತರ ಸಂಸ್ಥೆಯ ಕ್ಷೇತ್ರಾಧಿಕಾರಿ ಮತ್ತು ಇಲಾಖೆಯ ಸ್ಥಳಾಧಿಕಾರಿ ಜಂಟಿಯಾಗಿ ನಿರ್ವಹಿಸುವುದು.
2. ಅನುಬಂಧ-2 ರಲ್ಲಿ ಸಾವಯವ ಭಾಗ್ಯ ಹೋಬಳಿ ಮಟ್ಟದ ಕಾರ್ಯಕ್ರಮದಡಿ ಅನುಷ್ಠಾನಗೊಳಿಸಬಹುದಾದ ಕಾರ್ಯಕ್ರಮ/ಘಟಕಗಳು ಮತ್ತು ನೆರವಿನ ಪ್ರಮಾಣ ಹಾಗೂ ವಿವರವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಯೋಜನಾ ಅನುಷ್ಠಾನ ಪ್ರದೇಶದಲ್ಲಿ ನೊಂದಾಯಿಸಲಾಗಿರುವ/ನೊಂದಾಯಿಸಲಾಗುವ ಸಾವಯವ ಕೃಷಿಕರ ಸಂಘದ ಪ್ರತಿನಿಧಿಗಳು, ಸರ್ಕಾರೇತರ ಸಂಸ್ಥೆಯ ಪ್ರತಿನಿಧಿ ಹಾಗೂ ಇಲಾಖಾ ಸ್ಥಳಾಧಿಕಾರಿಗಳನ್ನೊಳಗೊಂಡ ಸ್ಥಳ ಸಮಿತಿಯನ್ನು (Site Committe) ರಚಿಸುವುದು. ಈ ಸ್ಥಳ ಸಮಿತಿಯು ಫಲಾನುಭವಿ ರೈತರುಗಳ ಬೇಡಿಕೆ ಹಾಗೂ ಯೋಜನಾ ಅನುಷ್ಠಾನ ಪ್ರದೇಶದ ಪ್ರಾಥಮಿಕ ಸಮೀಕ್ಷೆಯನ್ನು ಆಧರಿಸಿ ಯೋಜನಾ ಪ್ರದೇಶವನ್ನು ಸಾವಯವ ಕೃಷಿ ಪದ್ಧತಿಗಡೆ ಪರಿವರ್ತಿಸಲು ಸೂಕ್ತ ಕ್ರಿಯಾ ಯೋಜನೆ ಸಿದ್ದಪಡಿಸುವುದು. ಪ್ರತಿ ಹೋಬಳಿಯಿಂದ ಕ್ರಿಯಾ ಯೋಜನೆ (Action Plan) ಪಡೆದುಕೊಂಡು ಜಿಲ್ಲಾ ಚಾಲನಾ ಸಮಿತಿ ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಿ ಕಾರ್ಯಕ್ರಮ ಅನುಷ್ಠಾನಕ್ಕೆ ಅವಕಾಶ ಕಲ್ಪಿಸುವುದು. ಪ್ರಾರಂಭಿಕವಾಗಿ ಅನುಷ್ಠಾನ ಪ್ರದೇಶ ರೈತರ

ತರಬೇತಿ ಮತ್ತು ಸಾಮರ್ಥ್ಯವೃದ್ಧಿ, ಅಧ್ಯಯನ ಪ್ರವಾಸ, ಸಾವಯವ ಗೊಬ್ಬರ ಉತ್ಪಾದನೆ (ಎರೆಹುಳ ಘಟಕ, ಕಾಂಪೋಸ್ಟ್ ಘಟಕ, ಬಯೋಡೈಜಿಸ್ಟರ್ ಘಟಕ, ಹಸಿರೆಲೆ ಗೊಬ್ಬರ ಬೀಜ ವಿತರಣೆ ಇತ್ಯಾದಿ), ಪೋಷಕಾಂಶ ನಿರ್ವಹಣೆ ಈ ಮುಂತಾದ ಕಾರ್ಯಕ್ರಮಗಳಿಗೆ ಆದ್ಯತೆ ನೀಡುವುದು. ಕ್ರಿಯಾ ಯೋಜನೆಗೆ ನೀಡಿರುವ ಅನುದಾನವನ್ನು ಜೂನ್-2014 ರ ಅಂತ್ಯದೊಳಗೆ ಪೂರ್ಣವಾಗಿ ವೆಚ್ಚ ಮಾಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು. ಸರ್ಕಾರೇತರ ಸಂಸ್ಥೆಗಳ ನಾಲ್ಕು ತಿಂಗಳ ಆಡಳಿತಾತ್ಮಕ ವೆಚ್ಚಕ್ಕಾಗಿ ಮತ್ತು ಸಹಾಯಕ ಕೃಷಿ ನಿರ್ದೇಶಕರು ಮತ್ತು ಜಂಟಿ ಕೃಷಿ ನಿರ್ದೇಶಕರ ಕಛೇರಿ ವೆಚ್ಚಕ್ಕಾಗಿ ಅನುದಾನವನ್ನು ಉಪ ಶೀರ್ಷಿಕೆ 059 ಅಡಿಯಲ್ಲಿ ಬಿಡುಗಡೆ ಮಾಡಲಾಗಿದೆ. ಜಂಟಿ ಕೃಷಿ ನಿರ್ದೇಶಕರು ಮತ್ತು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಬಿಡುಗಡೆ ಮಾಡಲಾದ ಅನುದಾನವನ್ನು ಮಾಸಿಕ ಪ್ರಗತಿ ಪರಿಶೀಲನಾ ಸಭೆಗಳನ್ನು ಏರ್ಪಡಿಸಲು, ಸಭೆಗೆ ಆಗಮಿಸುವ ಪ್ರಗತಿ ಪರ ಸಾವಯವ ಕೃಷಿಕರಿಗೆ ಗೌರವ ಸಂಭಾವನೆ ಪಾವತಿಸಲು POL ಗಳಿಗಾಗಿ, ಜೆರಾಕ್ಸ್, ಪ್ರಿಂಟ್ ಔಟ್, ಲೇಖನ ಸಾಮಗ್ರಿ ಈ ಮುಂತಾದ ಉದ್ದೇಶಗಳಿಗೆ ಬಳಸಿಕೊಳ್ಳಬಹುದಾಗಿದೆ. ತಾಲ್ಲೂಕುವಾರು/ಜಿಲ್ಲಾವಾರು ಬಿಡುಗಡೆ ಮಾಡಲಾದ ಅನುದಾನದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

3. 2013-14 ನೇ ಸಾಲಿನ ಆರ್ಥಿಕ ವರ್ಷ ಕೊನೆಗೊಳ್ಳುತ್ತಾ ಬಂದಿರುವ ಹಿನ್ನೆಲೆಯಲ್ಲಿ ಆಯಾ ಜಿಲ್ಲೆಗೆ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣಕ್ಕೂ ಅಧ್ಯರ್ಪಣೆ/ವ್ಯರ್ಥ (Lapse) ಮಾಡದೇ ಬಿಡುಗಡೆ ಮಾಡಿರುವ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಳ್ಳುವುದು. ಒಂದು ವೇಳೆ ಅನುದಾನವು ಅಧ್ಯರ್ಪಣೆ/ವ್ಯರ್ಥ (Lapse) ಆದಲ್ಲಿ ಅದಕ್ಕೆ ಸಂಬಂಧಪಟ್ಟ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು/ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

( ಕರಡು ಕೃಷಿ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ)

ಕೃಷಿ ನಿರ್ದೇಶಕರ ಪರವಾಗಿ

ಇವರಿಗೆ

1. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ.
2. ಎಲ್ಲಾ ತಾಲ್ಲೂಕುಗಳ ಸಹಾಯಕ ಕೃಷಿ ನಿರ್ದೇಶಕರುಗಳಿಗೆ
3. ಸಾವಯವ ಭಾಗ್ಯ ಯೋಜನೆ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಸರ್ಕಾರೇತರ ಸಂಸ್ಥೆಗಳಿಗೆ.